# ಕ್ರೋಮ್ ಬೀಟಾ

ನಿಮ್ಮ ಬಳಿ ಇರುವ ಸ್ಮಾರ್ಟ್‌ಫೋನ್‌ನಲ್ಲಿ ಆ್ಯಂಡ್ರಾಯ್ಡ್ 4.0 (ಐಸ್‌ಕ್ರೀಂ ಸ್ಯಾಂಡ್‌ವಿಚ್) ಅಪ್ಲಿಕೇಶನ್ ಇದ್ದರೆ ಕ್ರೋಮ್ ಬೀಟಾ ಬ್ರೌಸರ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. ಗೂಗ್ಲ್ ಇದನ್ನು ಸುಧಾರಿಸಿರುವುದಾಗಿ ಪ್ರಕಟಿಸಿದ್ದು 32 ಭಾಷೆಗಳಲ್ಲಿ ಲಭ್ಯ. ಇದರಿಂದ ಬಳಕೆದಾರರು ಹಲವು ಸೌಲಭ್ಯಗಳನ್ನು ಪಡೆಯಬಹುದು.

ವೆಬ್‌ಸೈಟ್‌ಗಳನ್ನು ಮೊಬೈಲ್ ರೂಪದಲ್ಲಿ ಇಷ್ಟವಾಗದಿದ್ದರೆ ಡೆಸ್ಕ್‌ಟಾಪ್ ರೂಪದಲ್ಲಿ ಪಡೆಯಬಹುದು. ಜೊತೆಗೆ ಬುಕ್‌ಮಾರ್ಕ್‌ಗಳನ್ನು ಶಾರ್ಟ್‌ಕಟ್ ನಲ್ಲಿ ಸೇರಿಸಬಹುದು. ಇದರಿಂದ ನಿಮ್ಮ ಅಚ್ಚುಮೆಚ್ಚಿನ ವೆಬ್‌ಸೈಟ್‌ಗಳನ್ನು ಶೀಘ್ರವಾಗಿ ನೋಡಬಹುದು. ನಿಮಗೆ ಬೇಕಾದ ಅಪ್ಲಿಕೇಶನ್ ಸಂಪರ್ಕಗಳು ಕೂಡಾ ಕ್ರೋಮ್‌ನಲ್ಲಿ ಲಭ್ಯ. ವೈಫೈ ಸಂಪರ್ಕದಲ್ಲಿ ಬದಲಿ (ಪ್ರಾಕ್ಸಿ) ವ್ಯವಸ್ಥೆಯನ್ನು ಹೊಂದಬಹುದು.

ಆದರೆ ಶೇ. 97ರಷ್ಟು ಬಳಕೆದಾರರು ಇನ್ನೂ ಆ್ಯಂಡ್ರಾಯ್ಡ್ 4.0 ಸುಧಾರಿತ ರೂಪವನ್ನು ಹೊಂದಿಲ್ಲ. ಹೀಗಾಗಿ ಇಂತಹ ಸರಳ ಆದರೆ ಉಪಯೋಗವಾಗುವಂತಹ ಅಪ್ಲಿಕೇಶನ್ ಹೊಂದಲು ಕಾಯಬೇಕಾಗಿದೆ.



## ಅಡೋಬ್ ರೆವೆಲ್

ಇತ್ತೀಚಿನ ಸ್ಮಾರ್ಟ್‌ಫೋನ್ ಅತ್ಯಂತ ಶಕ್ತಿಯುತ ಕ್ಯಾಮೆರಾ ಒಳಗೊಂಡಿದ್ದು ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪರಸ್ಪರ ಹಂಚಿಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿದೆ. ಫೇಸ್‌ಬುಕ್‌ನಲ್ಲಿರುವ ಇನ್‌ಸ್ಟಾಗ್ರಾಂನಿಂದಾಗಿ ಲಕ್ಷಾಂತರ ಮಂದಿ ಫೇಸ್‌ಬುಕ್‌ನಲ್ಲಿ ಫೋಟೊ ಹಾಕಿಕೊಂಡು ಇತರರ ಫೋಟೊ ನೋಡುವುದು ಸಾಧ್ಯವಾಗಿದೆ.

ಅಡೋಬ್‌ನ ರೆವೆಲ್ (ಕೆರೌಸಲ್) ಈ ವಿಷಯದಲ್ಲಿ ವಿಭಿನ್ನ. ಇದರಿಂದ ಫೋಟೊವನ್ನು ನಿಮಗೆ ಬೇಕಾದ ರೀತಿಯಲ್ಲಿ ಸಂಸ್ಕರಿಸಬಹುದು. ಫೇಸ್‌ಬುಕ್ ಫ್ಲಿಕರ್, ಟ್ವಿಟ್ಟರ್‌ನಲ್ಲಿ ಹಾಕಿಕೊಂಡು ಆನಂದಿಸಬಹುದು. ಹಾಗೆಯೇ ಸಂಸ್ಕರಿಸುವ ಪರಿಕರಗಳ ಗುಣಮಟ್ಟ ಉತ್ತಮವಾಗಿದ್ದು ವಿವಿಧ ಉಪಕರಣಗಳಲ್ಲಿ ಸಂಗ್ರಹಿಸಿಡಬಹುದು. ಈ ಅಪ್ಲಿಕೇಶನ್‌ನಿಂದ ಫೋಟೊಗಳನ್ನು ಆಯ್ಕೆ ಮಾಡಿ ಆನ್‌ಲೈನ್‌ನಲ್ಲಿ ಸಂಗ್ರಹಿಸಬಹುದು. ಎಲ್ಲಾ ಫೋಟೊಗಳನ್ನು ನಿಮ್ಮ ಮೊಬೈಲ್ ಅಥವಾ ಕಂಪ್ಯೂಟರ್‌ಗೆ ಕಾಪಿ ಮಾಡಬಹುದು. ಫಿಲ್ಟರ್‌ಗಳು, ಕ್ರಾಪ್ ಮತ್ತು ರೊಟೇಟ್, ಟಿಂಟ್, ಶಾಡೊ ಮೊದಲಾದ ಆಯ್ಕೆಗಳಿವೆ.

## ಆನ್‌ಲೈನ್ ಭಾರತೀಯ ಸಂಗೀತ

ಈಗ ಆನ್‌ಲೈನ್ ಸಂಗೀತ ಜನಪ್ರಿಯ. ಲಕ್ಷಗಟ್ಟಳೆ ವೆಬ್‌ಸೈಟ್‌ಗಳು ಸಂಗೀತಕ್ಕೆಂದೇ ಮೀಸಲಾಗಿವೆ. ಭಾರತೀಯ ಸಂಗೀತ ಸವಿಯುವವರಿಗೆ humma.co ಒಟ್ಟು 15 ವಿವಿಧ ಭಾಷೆಗಳಲ್ಲಿ ರಸದೌತಣ ನೀಡುತ್ತಿದೆ. ಶಾಸ್ತ್ರೀಯ, ಜಾನಪದ, ಗಝಲ್, ಭಕ್ತಿ ಗೀತೆ ಹೀಗೆ ಸಂಗೀತದ ವಿವಿಧ ಪ್ರಕಾರಗಳು ಇಲ್ಲಿ ಲಭ್ಯ. ಆನ್‌ಲೈನ್‌ನಲ್ಲೇ ಕೇಳುವುದಾದರೆ ಇದು ಉಚಿತ. ಡೌನ್‌ಲೋಡ್ ಮಾಡುವುದಾದರೆ ಹಣ ಪಾವತಿಸಬೇಕು. ನಿಮ್ಮದೇ ಪೇಜ್ ಸೃಷ್ಟಿಸಿ ವೈಯಕ್ತಿಕ ಆಯ್ಕೆಯ ಸಂಗೀತದ ಪಟ್ಟಿ ಮಾಡಿ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು.



## ವಿಡ್ಡಿ ಜನಪ್ರಿಯ

ಫೇಸ್‌ಬುಕ್ ಫೋಟೊ ಹಂಚಿಕೊಳ್ಳುವ ಸೇವೆಯನ್ನು ಹೊರತಂದಾಗ ಈ ವಿಷಯದಲ್ಲಿ ಸೋಶಿಯಲ್‌ಕಾಮ್, ವಿಡ್ಡಿ, ಕ್ಲಿಪ್, ಮೋಬ್ಲಿ, ಕಲರ್ ಸ್ಪರ್ಧೆಗಳಿದ್ದವು. ಇವುಗಳಲ್ಲಿ ಗೆದ್ದಿದ್ದು ವಿಡ್ಡಿ. ಇದು ಉಚಿತ ಐಫೋನ್ ಅಪ್ಲಿಕೇಶನ್.

ಇದು ಸಾಮಾಜಿಕ ವಿಡಿಯೋ ಹಂಚಿಕೊಳ್ಳುವ ಅಪ್ಲಿಕೇಶನ್. ಇದರ ಮೂಲಕ ಬಳಕೆದಾರರು ತಮ್ಮ ಮೊಬೈಲ್ ಮೂಲಕ 15 ಸೆಕೆಂಡುಗಳ ವಿಡಿಯೋ ಕ್ಲಿಪ್ ಗಳನ್ನು ಚಿತ್ರೀಕರಣ ಮಾಡಬಹುದು. ಜೊತೆಗೆ ಆಡಿಯೊ ಎಫೆಕ್ಟ್ ಕೂಡ ಕೊಡಬಹುದು. ತಮ್ಮ ಮೆಚ್ಚಿನ ಸಿನಿಮಾ, ಸಂಗೀತಗಾರರ ಸಂಗೀತವನ್ನು ವಿಡಿಯೋಗೆ ಅಳವಡಿಸಿ ಫೇಸ್‌ಬುಕ್, ಟ್ವಿಟ್ಟರ್ ಹಾಗೂ ಯೂಟ್ಯೂಬ್‌ನಲ್ಲಿ ಹಂಚಿಕೊಳ್ಳಬಹುದು.

■ ಎಸ್.ತುಂಬೆ